ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಲ್ಲಿಸಿದೆ,

ವಿಷಯ: Construction of CC Drains at Bhadrappa layout in ward no.08, Kodigehalli sub division(Change OF Work:- Drilling of Borwell at Devinagara and Maruthinagara in ward no.8 Kodigehalli, Kodigehalli sub division) ಕಾಮಗಾರಿಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ: ಮಾನ್ಯ ವಿಧಾನ ಸಭಾ ಶಾಸಕರರವರ ಪತ್ರದ ಸಂಖ್ಯೆ: 573/12–13 ದಿನಾಂಕ: 23–2–2013

* * * * * * *

(1) ಯಲಹಂಕ ವಲಯ, ಬ್ಯಾಟರಾಯನಪುರ ವಿಭಾಗ ವ್ಯಾಪ್ತಿಯಲ್ಲಿ ಬರುವ ವಾರ್ಡ್. 08 (ಕೊಡಿಗೇಹಳ್ಳಿ) ವ್ಯಾಪ್ತಿಯಲ್ಲಿ ಕಾಂಕ್ರೀಟ್ ಚರಂಡಿ ಕಾಮಗಾರಿಗೆ ರೂ. 9.50 ಲಕ್ಷಗಳಿಗೆ ಅನುಮೋದನೆಯಾಗಿರುತ್ತದೆ. ಸದರಿ ಕಾಮಗಾರಿಯನ್ನು ಟೆಂಡರ್ ಕರೆಯಲಾಗಿದ್ದು, ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ ರವರ ಕಾರ್ಯಾದೇಶ ಸಂಖ್ಯೆ: EE/BTP/BBMP/E-TND/WO/237/2011–12 ದಿ: 10.11.2011 ರಂದು ಶ್ರೀ ಭಾಸ್ಕರ್ ಎ. ಗುತ್ತಿಗೆದಾರರಿಗೆ ಕಾರ್ಯಾದೇಶ ಆಗಿರುತ್ತದೆ. ಮುಂದುವರೆದಂತೆ ಕಾಮಗಾರಿಯನ್ನು ನಿರ್ವಹಿಸುವ ಸ್ಥಳದಲ್ಲಿ ಬೆಂಗಳೂರು ಜಲಮಂಡಳಿರವರಿಂದ ಒಳಚರಂಡಿ ಕಾಮಗಾರಿ ಪ್ರಗತಿಯಲ್ಲಿದ್ದು, ಸದರಿ ಒಳಚರಂಡಿ ಕಾಮಗಾರಿ ಪೂರ್ಣಗೊಳಿಸಲು ಸುಮಾರು 1 ವರ್ಷ ಕಾಲಾವಕಾಶ ಬೇಕಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯ ಬದಲಾಗಿ ದೇವಿನಗರ ಮತ್ತು ಮಾರುತಿನಗರ ಬಡಾವಣೆಗಳಲ್ಲಿ ನೀರಿನ ಅಭಾವ ಹೆಚ್ಚಾಗಿದ್ದು, ಈ ಭಾಗದಲ್ಲಿ ಹಿಂದೆ ಕೊರೆದಿರುವ ಕೊಳವೆ ಬಾವಿಗಳಲ್ಲಿ ನೀರಿನ ಇಳುವರಿ ಕಡಿಮೆಯಾಗಿದ್ದು, ಕೆಲವು ಕೊಳವೆ ಬಾವಿಗಳು ಬತ್ತಿಹೊಗಿರುತ್ತವೆ. ಆದ್ದರಿಂದ ಸದರಿ ವಾರ್ಡ್ ವ್ಯಾಪ್ತಿಯಲ್ಲಿ ದೇವಿನಗರ ಮತ್ತು ಮಾರುತಿನಗರ ಬಡಾವಣೆಗಳಲ್ಲಿ 2 ಕೊಳವೆ ಬಾವಿಗಳನ್ನು ಕೊರೆಯಲು ಉಲ್ಲೇಖ (1)ರ ಪತ್ರದಲ್ಲಿ ಮಾನ್ಯ ಶಾಸಕರಾದ ಶ್ರೀ. ಕೃಷ್ಣ ಭೈರೇಗೌಡರವರ ಪತ್ರದ ಸಂಖ್ಯೆ: 573/12–13 ದಿನಾಂಕ: 23.02.2013ರಲ್ಲಿ ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ, ಬಿಬಿಎಂಪಿ ರವರಲ್ಲಿ ಕೋರಿರುತ್ತಾರೆ. ಸದರಿಯವರ ಕೋರಿಕೆಯ ಮೇರೆಗೆ ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯ ರವರು ಈ ಬಗ್ಗೆ ಮುಖ್ಯ ಅಭಿಯಂತರರಿಗೆ ಇದರ ಬಗ್ಗೆ ಸೂಚಿಸಿರುವುದರಿಂದ ಮುಖ್ಯ ಅಭಿಯಂತರರು, ಯಲಹಂಕ ವಲಯ ರವರು ವಾರ್ಡ್ ವ್ಯಾಪ್ತಿಯಲ್ಲಿನ ಕೊಳವೆ ಬಾವಿಗಳ ವಿವರಗಳನ್ನು ನೀಡಲು ಸೂಚಿಸಿರುತ್ತಾರೆ. ಅದರಂತೆ ವಿವರಗಳನ್ನು ತಯಾರಿಸಿ ಈ ಕಡತದಲ್ಲಿ ಲಗತ್ತಿಸಿದೆ. ಈ ಕೆಳಕಂಡ ಕಾಮಗಾರಿಯ ಬದಲಾಗಿ 2 ಕೊಳವೆ ಬಾವಿಗಳನ್ನು ಕೊರೆಯಲು ಕೋರಿರುತ್ತಾರೆ.

ಕ್ರ ಸಂ	ಪ್ರಸ್ಥುತ ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಬದಲಿ ಕಾಮಗಾರಿಯ ಹೆಸರು	ಷರಾ
1	Construction of CC Drains at Bhadrappa layout in ward no.08, Kodigehalli sub division	Rs.9.50 Lakhs	Drilling of Borewells at Maruthinagara and Devinagara in ward no 08 Kodigehalli	Job Code No: 008–12–000026

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಈ ಮೇಲ್ಕಂಡ ಕಾಮಗಾರಿಗೆ ಸಕ್ಷಮ ಅಧಿಕಾರಿಗಳಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ಅನುಮೋದನೆಯಾಗಿದ್ದು, ಸದರಿ ಕಾಮಗಾರಿಯನ್ನು ಇ-ಟೆಂಡರ್ ಮೂಲಕ ಟೆಂಡರ್ ಕರೆದಿದ್ದು, ಸದರಿ ಕಾಮಗಾರಿಯನ್ನು ನಿರ್ವಹಿಸುವ ಸ್ಥಳದಲ್ಲಿ ಬೆಂಗಳೂರು ಜಲ ಮಂಡಳಿಯವರಿಂದ ಕಾಮಗಾರಿ ಪ್ರಗತಿಯಲ್ಲಿರುವ್ಯದರಿಂದ ಸದರಿ ಕಾಮಗಾರಿಯನ್ನು ನಿರ್ವಹಿಸಲು ಹೆಚ್ಚು ಕಾಲಾವಕಾಸ ಬೇಕಾಗಿರುವುದರಿಂದ ಸದರಿ ಕಾಮಗಾರಿಗೆ ಬದಲಾಗಿ ವಾರ್ಡ್ ನಂ.08ರಲ್ಲಿ 2 ಕೊಳವೆ ಬಾವಿ ಕೊರೆಯುವಂತೆ 2011-12ನೇ ಸಾಲಿನ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ಮತ್ತು 2012-13ನೇ ಸಾಲಿನ ಲೋಕೋಪಯೋಗಿ ಇಲಾಖೆ ಹಾಗೂ ಅನುಮೋದಿತ ದರಗಳಂತೆ ರೂ. 9.50 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಲಾಗಿದೆ. ಸದರಿ ಬದಲಾದ ಅಚಿದಾಜು ಪಟ್ಟಿಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಯನ್ನು ಸಕ್ಷಮ ಪ್ರಾಧಿಕಾರಿಗಳಿಂದ ಅನುಮೋದನೆ ನೀಡಲು ಕೋರಿ ಹಾಗೂ ಈ ಹಿಂದೆ ಕಾರ್ಯಾದೇಶ ಪಡೆದ ಗುತ್ತಿಗೆದಾರರಿಗೆ ಇಎಂಡಿ ಮೊತ್ತವನ್ನು ಹಿಂದುಗಿಸಲು ಕೋರಿ ಕಡತವನ್ನು ತಮ್ಮ ಆದೇಶಕ್ಕಾಗಿ ಮಂಡಿಸಿದೆ.

ಸಹಾಯಕ ಅಭಿಯಂತರರು
ವಾರ್ಡ್ ನಂ.08

ಸಹಾಯಕ ಕಾರ್ಯಪಾಲಕ ಅಭಿಯಂತರರು
ಕೊಡಿಗೇಹಳ್ಳಿ ಉಪವಿಭಾಗ
ಯಲಹಂಕ ವಲಯ, ಬಿ.ಬಿ.ಎಂ.ಪಿ
ಬೆಂಗಳೂರು - 560092

ಕಾ.ಪಾ.ಅ.

ಕಂಡಿಕೆ(1) ಹಾಗೂ (2)ರ ಸ.ಕಾ.ಅ(ಕೊಉವಿ)ರವರ ವರಿಯನ್ನು ತಮ್ಮ ಅವಗಾಹನೆಗೆ ತರಲಾಗಿದೆ

ಕಾ.ಪಾ.ಅ.

ವಾರ್ಡ್ ನಂ, 8 ಕೊಡಿಗೇಹಳ್ಳಿ ವ್ಯಾಪ್ತಿಯಲ್ಲಿ Construction of CC Drains at Bhadrappa layout in ward no.08, Kodigehalli sub division ಕಾಮಗಾರಿಯನ್ನು ನಿರ್ವಹಿಸಲು ಟೆಂಡರ್ ಕರೆದು ಗುತ್ತಿಗೆದಾರರಾದ ಶ್ರೀ ಭಾಸ್ಕರ್ ಎ. ದಿ: 10.11.2011 ರಂದು ಕಾರ್ಯದೇಶವನ್ನು ನೀಡಲಾಗಿರುತ್ತದೆ. ಆದರೆ ಸದರಿ ಕಾಮಗಾರಿಯ ಸ್ಥಳದಲ್ಲಿ ಒಳಚರಂಡಿ ಕಾಮಗಾರಿಯ ಪ್ರಗತಿಯಲ್ಲಿದ್ದು, ಕಾಮಗಾರಿ ಪೂರ್ಣಗೊಳ್ಳಲು ಸರಿಸುಮಾರು 1 ವರ್ಷ ಅವಧಿ ಬೇಕಾಗಿರುತ್ತದೆ. ಆದ್ದರಿಂದ ಸದರಿ ಕಾಮಗಾರಿಯನ್ನು ರದ್ದುಗೊಳಿಸಿ ಸದರಿ ಕಾಮಗಾರಿಯ ಬದಲಾಗಿ ವಾರ್ಡ್ ವ್ಯಾಪ್ತಿಯಲ್ಲಿ ನೀರಿನ ಬವಣೆ ಹೆಚ್ಚಾಗಿರುವುದರಿಂದ 2 ಕೊಳವೆ ಬಾವಿಗಳನ್ನು ಕೊರೆಯಲು ಮಾನ್ಯ ಶಾಸಕರು ದಿ:23-02-2013ರಂದು ಜಂಟಿ ಆಯುಕ್ತರು (ಯಲಹಂಕ ವಲಯ)ರವರಿಗೆ ಕಾಮಗಾರಿ ಬದಲಾವಣೆಗಾಗಿ ಪತ್ರ ನೀಡಿರುತ್ತಾರೆ.

ಅದರಂತೆ Construction of CC Drains at Bhadrappa layout in ward no.08, Kodigehalli sub division ಕಾಮಗಾರಿಯ ಬದಲಾಗಿ 2 ಕೊಳವೆ ಬಾವಿಗಳನ್ನು ದೇವಿನಗರ ಮತ್ತು ಮುನೇಶ್ವರ ಬಡಾವಣೆಗಳಲ್ಲಿ ಕೊಳವೆ ಬಾವಿಯನ್ನು ಕೊರೆಯಲು ಅಂದಾಜು ಪಟ್ಟಿಯನ್ನು ರೂ. 9.50 ಲಕ್ಷಗಳಿಗೆ ಸ.ಕಾ.ಅ(ಕೊಉವಿ) ರವರು ಸಲ್ಲಿಸಿದ್ದು, ಆಡಳಿತಾತ್ಮಕ ಅನುಮೋದನೆಯನ್ನು ಮಾನ್ಯ ಜಂಟಿ ಆಯುಕ್ತರವರಲ್ಲಿ ಕೋರುತ್ತಾ ಕಡತವನ್ನು ತಮ್ಮ ಅವಗಾಹನೆಗೆ ಸಲ್ಲಿಸಿದೆ.

26/2/2013

ಕಾರ್ಯಪಾಲಕ ಅಭಿಯಂತರರು

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ 3

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಮುಖ್ಯ ಅಭಿಯಂತರರು (ಯಲಹಂಕ ವಲಯ)

ಕಂಡಿಕೆ ( ) ರಿಂದ ( )ವರೆಗೆ ತಮ್ಮ ಅವಗಾಹನೆಗೆ ತರುತ್ತಾ ಕಾರ್ಯಪಾಲಕ ಅಭಿಯಂತರರು, ಬ್ಯಾಟರಾಯನಪುರ ವಿಭಾಗ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ.08ರ ಕೊಡಿಗೇಹಳ್ಳಿಯಲ್ಲಿ Construction of CC Drains at Bhadrappa layout in ward no.08, Kodigehalli sub division ಕಾಮಗಾರಿ ಸಂಕೇತ: 008–12–000026 ಮಾನ್ಯ ಶಾಸಕರ 2011–12ನೇ ಸಾಲಿನ ಅನುದಾನದ ಯೋಜನೆಯಡಿ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿ ನೀಡಿದ್ದು, ಸದರಿ ಕಾಮಗಾರಿಯನ್ನು ಇ–ಟೆಂಡರ್ ಮೂಖಾಂತರ ಗುತ್ತಿಗೆದಾರರಾದ ಶ್ರೀ ಭಾಸ್ಕರ್ ಎ. ರವರಿಗೆ ಗುತ್ತಿಗೆ ಕರಾರಿನ ಸಂಖ್ಯೆ: 237/2011–12 ದಿನಾಂಕ: 10–11–2011ರಂದು 90 ದಿನಗಳ ಕಾಮಗಾರಿಯನ್ನು ಪೂರ್ಣಗೊಳಿಸಲು ಕಾರ್ಯಾದೇಶವನ್ನು ನೀಡಿರುತ್ತಾರೆ.

ಸದರಿ ಸ್ಥಳದಲ್ಲಿ ಬೆಂಗಳೂರು ಜಲಮಂಡಳಿಯವರಿಂದ ಒಳಚರಂಡಿ ಕೊಳವೆಗಳನ್ನು ಅಳವಡಿಸಲು ಕಾಮಗಾರಿಯನ್ನು ಪೂರ್ಣಗೊಳಿಸಲು 1 ವರ್ಷ ಕಾಲಾವಕಾಶ ಬೇಕಾಗಿರುವುದರಿಂದ ಸದರಿ ವ್ಯಾಪ್ತಿಯ ಶಾಸಕರಾದ ಶ್ರೀ ಕೃಷ್ಣ ಭೈರೇಗೌಡರವರು ಬರೆದ ಪತ್ರ ಸಂ: 573/12–13 ದಿ: 23–02–2013ರಲ್ಲಿ ಸದರಿ ಹಾಲಿ ಕಾಮಗಾರಿಗೆ ಬದಲಾಗಿ ದೇವಿನಗರ ಮತ್ತು ಮುನೇಶ್ವರ ಬ್ಲಾಕ್‌ನಲ್ಲಿ ನೀರಿನ ಅಭಾವ ಇರುವುದರಿಂದ ಕೊಳವೆಬಾವಿಗಳನ್ನು ಕೊರೆದು ಪಂಪು–ಮೋಟಾರ್‌ಗಳನ್ನು ಅಳವಡಿಸಿ ವಿದ್ಯುತ್ ಸಂಪರ್ಕ ಇತ್ಯಾದಿ ಕಾಮಗಾರಿಯನ್ನು ಮಾಡಲು ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರಿಗೆ ಪತ್ರವನ್ನು ಬರೆದಿದ್ದು, ಈ ಪತ್ರವನ್ನು ಕಡತದಲ್ಲಿ ಲಗ್ಗತ್ತಿಸಲಾಗಿದೆ. ಹಿಂದೆ ಅನುಮೋದಿತವಾದ ಅಂದಾಜು ಪಟ್ಟಿಯ ಕಾಮಗಾರಿಯ ಪೂರ್ಣ ಬದಲಾಗಿರುವುದರಿಂದ 125% ಹೆಚ್ಚುವರಿಯಾಗಿ ಕಾಮಗಾರಿ ನಿರ್ವಹಿಸಲು ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ 2011–12ನೇ ಸಾಲಿನ ಮತ್ತು ಲೋಕೋಪಯೋಗಿ ಇಲಾಖೆ 2012–13ನೇ ಸಾಲಿನ ದರಗಳಂತೆ ಮಾರ್ಪಾಡು ಅಚಿದಾಜು ಪಟ್ಟಿಯನ್ನು ತಯಾರಿಸಿರುತ್ತಾರೆ. ಸದರಿ ಮಾರ್ಪಾಡು ಅಂದಾಜು ಪಟ್ಟಿ ಮೊತ್ತ ರೂ.9.50 ಲಕ್ಷಗಳಿಗೆ ತಯಾರಿಸಿ ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ) ಸದರಿ ಮಾರ್ಪಾಡು ಅಂದಾಜು ಪಟ್ಟಿಯನ್ನು ಕೆಳಕಂಡಂತೆ ವಿವರಿಸಿರುತ್ತಾರೆ.

ಕ್ರ.ಸಂ	ಕೆಲಸ ನಿರ್ವಹಿಸುವ ಸ್ಥಳ	ಅನುಮೋದಿತವಾದ ಮೊತ್ತ	ಮಾರ್ಪಾಡು ಅಂದಾಜು ಪಟ್ಟಿಯ ಸ್ಥಳ	ಮೊತ್ತ	ಷರಾ
1	Construction of CC Drains at Bhadrappa layout in ward no.08, Kodigehalli sub division	ರೂ. 9.50 ಲಕ್ಷ	Drilling of Borwell at Devinagara and Maruthinagara in ward no.8 Kodigehalli, Kodigehalli sub division	ರೂ. 9.50	ಮಾನ್ಯ ಶಾಸಕರು ಕೋರಿರುವ ಪತ್ರದಂತೆ ಮಾರ್ಪಾಡು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು

ಸದರಿ ಕಾಮಗಾರಿಯನ್ನು ಮಾರ್ಪಾಡು ಅಂದಾಜು ಪಟ್ಟಿಗೆ ಮಾನ್ಯ ಆಯುಕ್ತರ ಸುತ್ತೋಲೆ ಪತ್ರ ಸಂಖ್ಯೆ:ಆಆ/ಪಿಆರ್/ಇಐಸಿ/ಎಫ್/1177/2011–12 ದಿನಾಂಕ: 23–01–2012ರಲ್ಲಿ ರೂ. 20.00ಲಕ್ಷಗಳಿಗೆ ಕಡಿಮೆ ಮತ್ತು ಬದಲಾದ ಕಾಮಗಾರಿಗಳಿಗೆ ಅನುಮೋದನೆಯನ್ನು ವಲಯ/ಜಂಟಿ ಆಯುಕ್ತರು, ಬದಲಾದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಲು ಹಾಗೂ ತಾಂತ್ರಿಕ ಮಂಜೂರಾತಿಯನ್ನು ನೀಡಲು ಮುಖ್ಯ ಅಭಿಯಂತರರವರು ಆಯಾ ವಲಯದವರಿಗೆ ಅನುಮೋದನೆಯನ್ನು ನೀಡಲು ಸೂಚಿಸಿರುವಂತೆ ಈ ಕಾಮಗಾರಿಯನ್ನು ಈ ಮಾರ್ಪಾಡು ಕಾಮಗಾರಿಯ ಅಂದಾಜು ಪಟ್ಟಿಯಲ್ಲಿ ತಯಾರಿಸಿ ಸಕ್ಷಮ ಅಧಿಕಾರಿಗಳಿಂದ ಆಡಳಿತಾತ್ಮಕ ಅನುಮೋದನೆಯನ್ನು ಪಡೆಯಲು ಮಾನ್ಯ ಜಂಟಿ ಆಯುಕ್ತರು, ಯಲಹಂಕ ವಲಯರವರಿಗೆ ಕಡತವನ್ನು ತಮ್ಮ ಮುಂದಿನ ಕ್ರಮಕ್ಕಾಗಿ ಸಲ್ಲಿಸಿದೆ.

ತಾಂತ್ರಿಕ ಸಹಾಯಕರು

ವಿಷಯ :

ಪುಟದ ಸಂಖ್ಯೆ .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

(10) ಮುಖ್ಯ ಅಭಿಯಂತರರು (ಯವ)

ಮಾರ್ಪಾಡು ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲು ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ)ರವರು ಕಂಡಿಕೆ (1) ರಿಂದ (7)ವರೆಗೆ ವರದಿಯಲ್ಲಿ ಕೋರಿರುವುದರಿಂದ ಅನುಮೋದಿಸಬಹುದಾಗಿದೆ. ಈ ಕಾಮಗಾರಿಗೆ ಹಿಂದೆ ಟೆಂಡರ್ ಕರೆದಿರುವುದನ್ನು ರದ್ದುಪಡಿಸಿ ಹೊಸ ಟೆಂಡರ್‌ನ್ನು ಕರೆಯಲು ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ)ರವರಿಗೆ ಆದೇಶಿಸಬಹುದಾಗಿದೆ. ಮಾರ್ಪಾಡು ಅಂದಾಜು ಪಟ್ಟಿಯಂತೆ ಡಿಟಿಎಸ್ ಅನುಮೋದಿಸಲು ಕಾರ್ಯಪಾಲಕ ಅಭಿಯಂತರರು (ಬ್ಯಾ.ವಿ)ರವರು ಕ್ರಮವಹಿಸಬೇಕಾಗಿರುತ್ತದೆ.

ಮುಖ್ಯ ಅಭಿಯಂತರರು 28/2/13
ಯಲಹಂಕ ವಲಯ

(11) ಮಾನ್ಯ ಜಂಟಿ ಆಯುಕ್ತರು (ಯವ) 28/2/13

ಜಂಟಿ ಆಯುಕ್ತರು
ಯಲಹಂಕ ವಲಯ,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬ್ಯಾಲಕ್ಕಿಮನೆಮೆ, ಬೆಂಗಳೂರು-64

CE/Y

DM
28/2/2013

Code # Consult ಮುಗಿದ ನಂತರವೇ Tender ಕರೆಯುವುದು. ಇಲ್ಲವಾದಲ್ಲಿ ಮಾನ್ಯ ಆಯುಕ್ತರ ಅಧಿಕಾರವಧಿಯು ಮುಂದೆ ಕರೆಯುವುದಾಗಿದೆ.
ಸಹಿ -
16/4/2013

Received 27/2/2013

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಟಿಪ್ಪಣಿ ಹಾಳೆ

ವಿಷಯ ..... ಪುಟದ ಸಂಖ್ಯೆ ..... -5-

..... ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು
(13)	ಕಂಡಿಕೆ(6)ರಿಂದ(11)ರವರೆಗಿನ ವರದಿಯನ್ನು ತಮ್ಮ ಅವಗಾಹನೆಗೆ ತರಲಾಗಿದೆ. ಬ್ಯಾಟರಾರನಪುರ ವಿಭಾಗದ ವಾಡ್ ರ್ ನಂ: 08ರ ವ್ಯಾಪ್ತಿಯಲ್ಲಿ "Construction of CC drains at Bhadrappa layout in ward no:08,Kodigehalli sub division" ಕಾಮಗಾರಿಯನ್ನು ಕೈಗೊಳ್ಳಲು ಟೆಂಡರ್ ಕರೆದು ಗುತ್ತಿಗೆ ದಾರರಾದ ಶ್ರೀ.ಎ.ಬಾಸ್ಕರ್ ರವರಿಗೆ ದಿ:10-11-2011 ರಂದು ಕಾರ್ಯಾದೇಶ ನೀಡಲಾಗಿರುತ್ತದೆ.ಸದರಿ ಕಾಮಗಾರಿಯನ್ನು ಬದಲಾಯಿಸಿ "Improvements of roads and drains at Bhadrappa layout in ward no:08" ರಂತೆ ಮಾರ್ಪಾಡು ಮಾಡಲು ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಕೃಷ್ಣ ಬೈರೇಗೌಡರು ದಿ:01-10-2012 ರಂದು ಪತ್ರ ನೀಡಿರುತ್ತಾರೆ. ಅದರಂತೆ ಮಾರ್ಪಾಡಿತ ಅಂದಾಜು ಪಟ್ಟಿಗೆ ಅನುಮೋದನೆ ದೊರೆತಿದ್ದು ಗುತ್ತಿಗೆದಾರರು ಮಾರ್ಪಾಡಿತ ಕಾರ್ಯದೇಶವನ್ನು ಪಡೆದಿರುವುದಿಲ್ಲ. ಹಾಗೂ ಮಾರ್ಪಾಡಿತ ಕಾರ್ಯದೇಶವನ್ನು ಪಡೆಯುವಂತೆ ದಿ:7.02.2013ರಂದು ನೋಟೀಸ್ ಜಾರಿ ಮಾಡಲಾಗಿರುತ್ತದೆ.
(14)	ವಾರ್ಡ್ ನಂ:08ರ ವ್ಯಾಪ್ತಿಗೆ ಒಳಪಡುವ ದೇವಿನಗರ ಹಾಗೂ ಮಾರುತಿನಗರಗಳಲ್ಲಿ ನೀರಿನ ಬವಣೆ ಹೆಚ್ಚಾಗಿರುವುದರಿಂದ, ಬ್ಯಾಟರಾಯನಪುರ ವಿಧಾನ ಸಭಾ ಕ್ಷೇತ್ರದ ಶಾಸಕರಾದ ಮಾನ್ಯ ಕೃಷ್ಣ ಬೈರೇಗೌಡರುರವರು ದಿ:23.02.2013ರಂದು ಮಾನ್ಯ ಜಂಟಿ ಆಯುಕ್ತರು(ಯ.ವ)ರವರಿಗೆ ಸದರಿ ಕಾಮಗಾರಿಯ ಬದಲಾಗಿ ದೇವಿನಗರ ಹಾಗೂ ಮಾರುತಿನಗರಗಳಲ್ಲಿ ಕೊಳವೆ ಬಾವಿ ಕೊರೆದು ಪಂಪ್ ಸೆಟ್ ಅಳವಡಿಸಲು ಕೋರಿ ಪತ್ರ ನೀಡಿರುತ್ತಾರೆ. ಅದರಂತೆ, ಸಹಾಯಕ ಕಾರ್ಯಪಾಲಕ ಅಭಿಯಂತರರು(ಕೊ.ಉ.ವಿ)ರವರು ರೂ.9.50 ಲಕ್ಷಗಳಿಗೆ ಕೊಳವೆಬಾವಿಗಳನ್ನು ಕೊರೆದು ಪಂಪ್‌ಸೆಟ್ ಅಳವಡಿಸಲು ಅಂದಾಜು ಪಟ್ಟಿಯನ್ನು ತಯಾರಿಸಿ ಸಲ್ಲಿಸಿರುತ್ತಾರೆ.
(15)	ದಿನಾಂಕ:20.03.2013ರಿಂದ ಚುನಾವಣಾ ನೀತಿ ಸಂಹಿತೆ ಜಾರಿಯಲ್ಲಿದ್ದು , ಮಾನ್ಯ ಆಯುಕ್ತರು ಹಾಗೂ ಜಿಲ್ಲಾ ಚುನಾವಣಾ ಅಧಿಕಾರಿಗಳುರವರ ಅಧಿಕೃತ ಜ್ಞಾಪನಾಪತ್ರದ ಸಂಖ್ಯೆ:ವಿಆ(ಯೋ)ಪಿಆರ್/7727/2012-13 ದಿ:20.03.2013ರ ಕ್ರಮ ಸಂಖ್ಯೆ(4)ರಲ್ಲಿ **"ಕುಡಿಯುವ ನೀರು ಪೂರೈಕೆ,ಘನತ್ಯಾಜ್ಯ ನಿರ್ವಹಣೆ, ಭದ್ರತಾ ಸೇವೆಗಳು ಮತ್ತು ವಿಪತ್ತು ನಿರ್ವಹಣೆಗೆ ಸಂಬಂಧಪಟ್ಟ ಮುಂತಾದ ನಿರ್ವಹಣಾ ಕಾರ್ಯಗಳನ್ನು ಮಾತ್ರ ನಿಯಾಮಾನುಸಾರ ಕೈಗೆತ್ತಿಕೊಂಡು ನಿರ್ವಹಿಸಲು ಅವಕಾಶವಿರುತ್ತದೆ"** ಸದರಿ ಪ್ರಸ್ತಾವನೆಯು ಕುಡಿಯುವ ನೀರಿಗೆ ಸಂಭಂದಿಸಿದ್ದಾಗಿದ್ದು,ಸದರಿ ಬದಲಾದ ಕಾಮಗಾರಿಯಾದ **Drilling of borewells at Maruthi nagara and Devinagara I ward no:08,Kodigehalli** ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಅನುಮೋದನೆಯನ್ನು ಪಡೆದು ತುರ್ತಾಗಿ ಟೆಂಡರ್ ಕರೆದು ನೀರಿನ ಬವಣೆಯನ್ನು ಪೂರೈಸಲು ಮುಂದಿನ ಆದೇಶ ಕೋರಿ ಕಡತವನ್ನು ಮಂಡಿಸಿದೆ. ABP/bm 17/4/2013 ಕಾರ್ಯಪಾಲಕ ಅಭಿಯಂತರರು ಬ್ಯಾಟರಾಯನಪುರ ವಿಭಾಗ ಬೃ.ಬೆಂ.ಮ.ಪಾ
(16)	ಅಕ್ಷರಸ್ಥ ಕಿಟಿಯಂತೆ ಕಡತ ಯಲ ಕಂಕೆ ಮಲಯಿ ಕಿಟಿ ನಿಗಾ ಇಟ್ಟುಕೊಳ್ಳಲ ಕೈಕೊಳ್ಳಲು ೧೬(ಬೆನ್ನಚು) ರಂತೆ ದೃಢೀಕರಣ, ಮತ್ತು ಮೇಲಿನಂತೆ

ವಿಷಯ :

ಪುಟದ ಸಂಖ್ಯೆ ..... 6 .....

ಕಡತದ ಸಂಖ್ಯೆ .....

ಪಂಕ್ತಿಯ ಸಂಖ್ಯೆ	ಟಿಪ್ಪಣಿಗಳು ಮತ್ತು ಆಜ್ಞೆಗಳು

ಸಂ ಆ(ಯೋ)ಇ ಕಾ(ಸಾ)ಇ/ಸಿ/17/4/17

ಮಾನ್ಯ ಆಯುಕ್ತರು/ಅಪರ ಆಯುಕ್ತರು
ಯಲಹಂಕ ವಲಯ
ಜಿ.ಬಿ.ಬಿ.ಎಂ.ಪಿ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು-97

17) ಸಂಬಂಧಪಟ್ಟ ಯಲಹಂಕ ವಲಯ

ಚಿತ್ರಗಳು 17/4/13
ಜಂಟಿ ಆಯುಕ್ತರು
ಯಲಹಂಕ ವಲಯ,
ಜಿ.ಬಿ.ಬಿ.ಎಂ.ಪಿ ಬೆಂಗಳೂರು ಮಹಾನಗರ ಪಾಲಿಕೆ
ಬ್ಯಾಟರಾಯನಪುರ, ಬೆಂಗಳೂರು-92

~~ಕಂದಾಯ ಅಧಿಕಾರಿಗಳು (ಸಾ.ಆ)~~.

18) ಮು.ಆ.(ಯ.ವಲಯ) ಮಾಹಿತಿಯ ಅಂಶಗಳ ವಿವರ
(~~ಶಿವಗಿರಿ~~ ಅಧಿಕಾರಿಗೆ) T/S ಗೆ ಕ್ರಮ ಜರುಗಿಸಿ

11/07/13

19) TA ಕಾವೇರಿ ಅಧಿಕಾರಿಯಿಂದ ಮಾಹಿತಿ ಪಡೆದು ಅಂದಾಜು ವೆಚ್ಚಕ್ಕೆ ಅನುಮೋದನೆ ರೂ 9.50 ಲಕ್ಷಕ್ಕೆ ಮಂಜೂರಾತಿ ನೀಡಬಹುದಾಗಿದೆ.

11-07-13

20) ಮು-ಆ-(ಯ): ಮಾಹಿತಿಯ ಅಂಶಗಳ ವಿವರ T/S. ನೀಡಿದೆ. ಅನುಮೋದಿಸಿದೆ.

ಮಾನ್ಯ ಆಯುಕ್ತರು/ಅಪರ ಆಯುಕ್ತರು
ಯಲಹಂಕ ವಲಯ
ಜಿ.ಬಿ.ಬಿ.ಎಂ.ಪಿ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು-97

21) ಆಯುಕ್ತರು (BTP)

DM